## ಬೀಗ ಭಂಡಾರ!





ಮನೆ, ಅಂಗಡಿಗಳ ಭದ್ರತೆಯನ್ನು ಕಾಪಾಡುವ ಬೀಗಗಳ ಉಪಯೋಗ ಇಂದು ನಿನ್ನೆಯದಲ್ಲ. ಸುರಕ್ಷತೆಯ ಜೊತೆಗೆ ಕಾಲಕ್ರಮೇಣ ಇವುಗಳಲ್ಲಿ ವೈವಿಧ್ಯ, ನಾನಾ ವಿನ್ಯಾಸಗಳು ಮೈತಾಳಿದವು. ಮೀನು, ಜಿಂಕೆ, ಇಲಿ, ಕಪ್ಪೆ, ಸಿಂಹ, ಚೇಳು, ನಾಯಿ, ಟಗರು, ಅಡಕತ್ತರಿ, ರಾಟೆ, ಗೌತಮಬುದ್ಧ, ಲಕ್ಷ್ಮೀ, ಗಣಪತಿ... ಹೀಗೆ ಸಾಗುವ ಬೀಗಗಳ ಸುಂದರ ಆಕೃತಿಗಳಿರುವುದನ್ನು ನಂಬಲೂ ಸಾಧ್ಯವಿಲ್ಲ ಅಲ್ಲವೇ? ಉಡುಪಿ ಜಿಲ್ಲೆ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯ ಎದುರಿಗಿರುವ 'ಫೈ ಟಿಫಿನ್ಸ್' ಹೋಟೇಲಿನಲ್ಲಿ ಗಾಜಿನ ಎರಡು ಕಪಾಟು ತುಂಬ ಇಂತಹ ಅಪರೂಪ ಆಕಾರದ ಬೀಗಗಳನ್ನು ಜೋಡಿಸಿಡಲಾಗಿದೆ. ಸೋಜಿಗವೆಂದರೆ ಆ್ಯಂಟಿಕ್ ಪೀಸ್‌ನಂತಿರುವ ಈ ಬೀಗಗಳಿಗೆಲ್ಲ ಬೀಗದ ಕೈಯೂ ಇದೆ. ಒಂದೊಮ್ಮೆ ಬೀಗಗಳ ತಯಾರಿಕೆಗೆ ಹೆಸರಾದ ಉತ್ತರಕನ್ನಡ ಜಿಲ್ಲೆ ಮಾವಿನಕುರ್ವೆಯಿಂದ ಇವನ್ನೆಲ್ಲ ಸಂಗ್ರಹಿಸಿ ಇಲ್ಲಿ ಒಪ್ಪವಾಗಿ ಜೋಡಿಸಿಟ್ಟ ಪರಿ ಮೆಚ್ಚುವಂತದ್ದು.

—ಧರ್ಮಾನಂದ ಶಿರ್ವ, ಬೆಂಗಳೂರು



## ಉಚಿತ ಪಾದಮರ್ದನ ನಡಿಗೆ ಪಥ!

ಬೆಂಗಳೂರಿನ ಕನಕಪುರ ರಸ್ತೆ, ಹಾರೋಹಳ್ಳಿ ಸಮೀಪ ಕೆಬ್ಬೆದೊಡ್ಡಿ ಗ್ರಾಮದಲ್ಲಿ ಪಿರಾಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಎಂದೇ ಹೆಸರಾಗಿರುವ ಈ ಸುಂದರ ತಾಣವಿದೆ. ಇಲ್ಲಿ ಎಲ್ಲೆಲ್ಲೂ ಹಸಿರು ನಗುತ್ತಿದ್ದರೆ, ಮೌನ ಮಾತಾಡುತ್ತದೆ. ಮನಸ್ಸಿಗೆ ನೆಮ್ಮದಿ ಬಯಸುವವರು ಅಗತ್ಯವಾಗಿ ಇಲ್ಲಿಗೆ ಒಮ್ಮೆ ಭೇಟಿ ನೀಡಬೇಕು. ಉಚಿತ ಅನ್ನದಾನ ವ್ಯವಸ್ಥೆಯನ್ನೂ ಹೊಂದಿರುವ ಈ ಕೇಂದ್ರ ಮುಖ್ಯವಾಗಿ ಧ್ಯಾನ ಕೇಂದ್ರವಾಗಿದೆ. ಶಿವನ ತಾಣ, ಮೈತ್ರೇಯ ಬುದ್ಧ ಪಿರಾಮಿಡ್, ಕಿಂಗ್ಸ್ ಚೇಂಬರ್, ಲುಂಬಿನಿ ಗಾರ್ಡನ್, ಪಗೋಡ ಕಾಟೇಜ್ ಮೊದಲಾದ ಪ್ರೇಕ್ಷಣೀಯ ಸ್ಥಳಗಳ ಜೊತೆಗೆ ವಿಶೇಷವಾಗಿ ಗಮನ ಸೆಳೆಯುವ ಜಾಗ ಎಂದರೆ ಝೆನ್ ಪಾರ್ಕಿನ 'ಚಕ್ರವ್ಯೂಹ ವಾಯುವಿಹಾರ ಪಥ'. ಕಟ್ಟಡ ನಿರ್ಮಾಣದಲ್ಲಿ ಬಳಸುವ 'ಬೇಬಿ ಜಲ್ಲಿ' ತುಂಬಿಸಿರುವ ಈ ಮಾರ್ಗದಲ್ಲಿ ನಡೆಯುವುದೇ ಒಂದು ಸುಖದ ಅನುಭವ. ನೋಡಲು ಕಿರಿದಾಗಿ ಕಾಣುವ ಈ ಮಾರ್ಗವನ್ನು ಕ್ರಮಿಸಲು ಗಂಟೆಗಳೇ ಹಿಡಿಯುತ್ತವೆ. ಪಾದಗಳಲ್ಲಿ ಉಂಟಾಗುವ ಸಂಚಲನ ಕೆಲವೇ ಕ್ಷಣಗಳಲ್ಲಿ ಪೂರ್ಣ ದೇಹವನ್ನು ಆವರಿಸಿ ತೇಲುವ ಅನುಭವ ನೀಡುತ್ತದೆ. ಪಾರ್ಲರ್‌ಗಳಲ್ಲಿ ದುಬಾರಿ ಹಣ ಕೊಟ್ಟು ಅಂಗಮರ್ದನ ಮಾಡಿಸಿಕೊಳ್ಳುವುದಕ್ಕಿಂತ ಇಂತಹ ಸರಳ ವ್ಯವಸ್ಥೆಯನ್ನು ನಮ್ಮ ಮನೆಯ ಅಂಗಳದಲ್ಲಿ ನಾವೇ ಮಾಡಿಕೊಳ್ಳಬಹುದು. ನಡಿಗೆಗೂ ಆಧ್ಯಾತ್ಮದ ಸ್ಪರ್ಶ ನೀಡಿದ ಅಪರೂಪದ ಸ್ಥಳವಿದು.

—ವಾ. ಮುರಳೀಧರ, ತೀರ್ಥಹಳ್ಳಿ

## ಭತ್ತದ ಕಾವಲಿಗೆ ರೈತ ಕಂಡ ಉಪಾಯ

ಇತ್ತೀಚೆಗೆ ನಮ್ಮ ಊರಿನ ಜಮೀನಿಗೆ ಹೋಗಿದ್ದೆ. ಪದೇ ಪದೇ ಗಂಟೆಯ ರೀತಿಯ ಶಬ್ದ ಕೇಳಿ ಬರುತ್ತಿತ್ತು. ಉಳುಮೆ ಮಾಡುವ ಎತ್ತುಗಳ ಕುತ್ತಿಗೆಗೆ ಸಾಮಾನ್ಯವಾಗಿ ಗಂಟೆ ಕಟ್ಟಿರುತ್ತಾರೆ. ಕಿವಿಗೆ ಬೀಳುತ್ತಿದ್ದ ಆ ಶಬ್ದವೂ ಎತ್ತುಗಳದ್ದೇ ಇರಬೇಕೆಂದು ಸುತ್ತಮುತ್ತ ನೋಡಿದೆ. ಯಾವ ಜಾನುವಾರುಗಳೂ ಕಾಣಲಿಲ್ಲ. ಆದರೂ ಗಂಟೆಯ ಶಬ್ದ ಕೇಳುತ್ತಲೇ ಇತ್ತು. ಆಶ್ಚರ್ಯಗೊಂಡು, ಶಬ್ದ ಕೇಳಿ ಬರುತ್ತಿದ್ದ ಮಾರ್ಗದ ಕಡೆ ಹೊರಟೆ.

ಒಂದು ಕಡೆ ಭತ್ತದ ಪೈರಿಗಾಗಿ ಭತ್ತದ ಬಿತ್ತನೆ (ಹೊಟ್ಲು) ಹಾಕಿರುವ ಜಾಗ ಕಾಣಿಸಿತು. ಅಲ್ಲಿ ಬಿತ್ತನೆ ಮಾಡಿರುವ ಭತ್ತವನ್ನು ಪಕ್ಷಿಗಳು ತಿನ್ನಲು ಅಲ್ಲಿಗೆ ಬರುವುದನ್ನು ತಪ್ಪಿಸಲು ಶಬ್ದ ಬರುವಂತೆ ಗಾಜಿನ ಬಾಟಲುಗಳನ್ನು ಹಾಗೂ ಪುಸ್ತಕದ ರಟ್ಟನ್ನು, ಕೋಲು ನೆಟ್ಟು ಅವುಗಳನ್ನು ದಾರಕ್ಕೆ ಕಟ್ಟಿ ನೇತಾಡುವಂತೆ ಮಾಡಲಾಗಿತ್ತು. ಗಾಳಿ ಬೀಸಿದಂತೆ ಬಾಟಲುಗಳು ಒಂದಕೊಂದು ತಗುಲಿ ಗಂಟೆಯ ರೀತಿ ಶಬ್ದ ಬರುತ್ತಿತ್ತು. ಶಬ್ದಕ್ಕೆ ಭಯಪಟ್ಟು ಪಕ್ಷಿಗಳು ಬೀಜ ತಿನ್ನಲು ಬರುವುದಿಲ್ಲ. ಇದು ರೈತ ಕಂಡುಕೊಂಡ ಉಪಾಯ.

ರೈತ ತನ್ನ ಬೆಳೆಯನ್ನು ಕಾಪಾಡಲು ಜಮೀನಿನಲ್ಲೇ ಎಲ್ಲ ಸಮಯ ಇರಲು ಸಾಧ್ಯವಿಲ್ಲ. ಅದರ ಬದಲಿಗೆ ಈ ರೀತಿ ಖಾಲಿ ಗಾಜಿನ ಬಾಟಲುಗಳನ್ನು ಬಳಸಿ ಪಕ್ಷಿಗಳನ್ನು ಬೆಳೆ ತಿನ್ನಲು ಬಾರದಂತೆ ತಡೆಯುವುದು ಒಳ್ಳೆಯ ವಿಧಾನ ಮತ್ತು ಹಣವೂ ಖರ್ಚಾಗದು.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

